ಇದು ಬರೀ ಅವರ ಹಳ್ಳಿಗೆ ಮಾತ್ರ ಸಂಬಂಧಪಟ್ಟದ್ದಲ್ಲ. ಇಡೀ ಕರ್ನಾಟಕ ರಾಜ್ಯದಲ್ಲಿ ಎಲ್ಲೆಲ್ಲಿ ಇಂಥ ಪರಿಸ್ಥಿತಿ ಇದೆ, ಕೆಲವು ಕಡೆಗಳಲ್ಲಿ ಬೇರೆ ಕಡೆಯಿಂದ ನೀರು ತರಬೇಕಾಗುತ್ತದೆ, ಅದರ ಕಡೆ ನೇರವಾಗಿ ಲಕ್ಷ ಕೊಡತಕ್ಕದ್ದು ಸರ್ಕಾರದ ಜವಾಬ್ದಾರಿ ಎಂದು ನಾನು ತಿಳಿದುಕೊಂಡಿದ್ದೇನೆ. ಆದಕಾರಣ ಮಿನಿ ವಾಟರ್ ಸಪ್ಲೈ ಮಾಡುವುದಕ್ಕೆ ಸ್ವಲ್ಪ ತಡವಾದರೂ ನೇರವಾಗಿ ಅವರ ಕಷ್ಟ ನಿವಾರಣೆ ಮಾಡಲಿಕ್ಕೆ ಸರ್ವ ಪ್ರಯತ್ನ ಮಾಡುತ್ತೇವೆ. ಅದರಲ್ಲಿ ಮಾನ್ಯ ಸದಸ್ಯರಿಗೆ ಯಾವ ಅನುಮಾನ ಇರಬೇಕಾಗಿಲ್ಲ.

ಶ್ರೀ ಬಾಬುರಾವ್ ಚವಾಣ್:- ಬೇಸಿಗೆ ಹೋದನಂತರ ಉಪಯೋಗವಾಗುವುದಿಲ್ಲ. ಬೇಸಿಗೆಯಲ್ಲಿ ಮಾಡಿದರೆ ಉಪಯೋಗವಾಗುತ್ತದೆ.

ಶ್ರೀ ಎಂ.ವೈ. ಘೋರ್ಪಡೆ:- ನನ್ನ ಕ್ಷೇತ್ರದ ೪-೫ ಹಳ್ಳಿಗಳಲ್ಲಿ ಬೇಸಿಗೆ ಬಂದಾಗ ಈ ರೀತಿ ತೊಂದರೆ ಅನುಭವಿಸುತ್ತಿದ್ದೇವೆ. ನನ್ನ ಸ್ವಂತ ಕ್ಷೇತ್ರದಲ್ಲಿ ಏನು ಮಾಡುತ್ತಿದ್ದೇನೆ ಅಷ್ಟೇ ಕಾಳಜಿ ವಹಿಸಿ ಅವರ ಕ್ಷೇತ್ರದಲ್ಲೂ ಮಾಡೋಣ.

ವಿಷಯ:- ಗುತ್ತಿಗೆ ಆಧಾರದ ಮೇಲೆ ಭೂಮಾಪಕರ ನೇಮಕಾತಿ

ಚುಕ್ಕೆ ಗುರ್ತಿನ ಪ್ರಶ್ನೆ ಸಂಖ್ಯೆ ೪೯:- (೬೪೫)
ಶ್ರೀ ಗುರುಪಾದಪ್ಪ ನಾಗ್ಮಾರಪಲ್ಲಿ (ಬೀದರ್)
ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಗುತ್ತಿಗೆ ಆಧಾರದ ಮೇಲೆ ಭೂಮಾಪಕರುಗಳನ್ನು ನೇಮಕಾತಿ ಮಾಡಿಕೊಳ್ಳುವ ಸಲುವಾಗಿ ಇತ್ತೀಚೆಗೆ ಸಂದರ್ಶನ ನಡೆಸಿರುವುದು ನಿಜವಲ್ಲವೇ?
ಆ) ಹಾಗಿದ್ದಲ್ಲಿ ಸಂದರ್ಶನ ನಡೆಸಿ ಹಲವಾರು ದಿನಗಳಾದರೂ ಸಹ ನೇಮಕಾತಿ ಆದೇಶಗಳನ್ನು ಕಳುಹಿಸದಿರುವುದು ನಿಜವೇ?
ಇ) ಅಭ್ಯರ್ಥಿಯ ಆಯ್ಕೆಯ ಪಟ್ಟಿ ಸಿದ್ಧವಾಗಿದೆಯೇ (ಆಯ್ಕೆಯಾದ ಅಭ್ಯರ್ಥಿಯ ವಿವರಗಳನ್ನು ಜಿಲ್ಲಾವಾರು ನೀಡುವುದು)
ಈ) ಆಯ್ಕೆಯಾದವರಿಗೆ ಯಾವಾಗ ನೇಮಕಾತಿ ಆದೇಶಗಳನ್ನು ಕಳುಹಿಸಲಾಗುವುದು?

ಶ್ರೀ ಎಂ. ರಾಜಶೇಖರ ಮೂರ್ತಿ
(ಕಂದಾಯ ಸಚಿವರು)

ಹೌದು
ನಿಜ
ಹೌದು.

ಈ ವಿಷಯದ ಬಗ್ಗೆ ನ್ಯಾಯಾಲಯದ ತಡೆಯಾಜ್ಞೆ ಇರುವುದರಿಂದ ವಿವರಗಳನ್ನು ಈಗ ಒದಗಿಸಿಲ್ಲ.

ಕರ್ನಾಟಕ ಆಡಳಿತ ನ್ಯಾಯ ಮಂಡಳಿ ಹಾಗೂ ಉಚ್ಚ-ನ್ಯಾಯಲಯದಲ್ಲಿ ದಾವೆ ಅರ್ಜಿಗಳನ್ನು ಇತ್ಯರ್ಥಪಡಿಸಿದ ನಂತರ ಪರಿಶೀಲಿಸಲಾಗುವುದು ಹಾಗೂ ಇತರ ಸಾಧ್ಯತೆಗಳನ್ನು ಸಹಾ ಪರಿಶೀಲಿಸಲಾಗುವುದು.

ಶ್ರೀ ಗುರುಪಾದಪ್ಪ ನಾಗ್ಮಾರಪಲ್ಲಿ:- ಭೂಮಾಪಕರನ್ನು ಗುತ್ತಿಗೆ ಆಧಾರದ ಮೇಲೆ ತೆಗೆದುಕೊಂಡಿದ್ದೀರಾ ಎಂದರೆ 'ಹೌದು' ಎಂದು ಹೇಳಿದ್ದಾರೆ. ಅವರಿಗೆ ಸಂದರ್ಶನಕ್ಕೆ ಕರೆದಿದ್ದೀರಾ ಎಂದರೆ 'ಹೌದು' ಎಂದು ಹೇಳಿದ್ದಾರೆ. ಆರ್ಡರ್ ಏತಕ್ಕೆಕೊಡಲಿಲ್ಲವೆಂದರೆ ಕೇಸು ನ್ಯಾಯಾಲಯದಲ್ಲಿ ಇದೆ ಎಂದು ಹೇಳಿದ್ದಾರೆ. ನಾನು ಏನು ಪಟ್ಟಿ ಕೇಳಿದ್ದೆ ಅದನ್ನು

ನ್ಯಾಯಾಲಯದಲ್ಲಿದ್ದರೂ ಕೊಡಬೇಕಾಗಿತ್ತು. ಎಷ್ಟು ದಿನಗಳವರೆಗೆ ನ್ಯಾಯಾಲಯದಲ್ಲಿ ಇರುವುದು? ನ್ಯಾಯಾಲಯಕ್ಕೆ ಹೋಗುವುದು ಬರುವುದು ಆದರೆ ಬಡ ಹುಡುಗರ ಗತಿ ಏನಾಗಬೇಕು? ಸರ್ಕಾರದವರು ಏನು ಕ್ರಮ ಕೈಗೊಳ್ಳುತ್ತಿದ್ದೀರಿ? ದಾವಾ ಅರ್ಜಿಗಳನ್ನು ಇತ್ಯರ್ಥ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ? ಈ ಬಗ್ಗೆ ಖಚಿತವಾದ ಉತ್ತರ ಹೇಳಬೇಕು.

ಶ್ರೀ ಎಂ. ರಾಜಶೇಖರ ಮೂರ್ತಿ:- ೧೦೩೧ ಸಂಖ್ಯೆ ಇರುವುದರಿಂದ ಟೈಪ್ ಮಾಡಿಕೊಡಬೇಕಾದರೆ ಸ್ವಲ್ಪ ತೊಂದರೆಯಾಗಿದೆಯೆಂದು ಆ ಲಿಸ್ಟ್ ಇನ್ನೂ ಒದಗಿಸಿಲ್ಲ. ನ್ಯಾಯಾಲಯದಲ್ಲಿ ಇದೆ. ಅವರು ಸ್ಟೇ ಕೊಟ್ಟಿದ್ದಾರೆ. ಕೆಲವು ಕಡೆ ಸ್ಟೇ ಕೊಟ್ಟಿದ್ದಾರೆ, ಕೆಲವು ಕಡೆ ಕೊಟ್ಟಿಲ್ಲ. ಮ್ಯಾಟರ್ ಸಬ್‌ಜುಡಿಸ್ ಇದೆ. ಸ್ಟೇ ವೆಕೇಟ್ ಮಾಡಿಸಿ ಜಾರಿಗೆ ಕೊಡಬೇಕೆಂದು ಪ್ರಯತ್ನ ಮಾಡುತಿದ್ದೇವೆ. ಹೈಕೋರ್ಟಿನವರು ಲಿಸ್ಟ್ ಪಬ್ಲಿಷ್ ಮಾಡಬಾರದೆಂದು ಸ್ಟೇ ಕೊಟ್ಟರು. ಆ ತೊಂದರೆಯಿಂದ ಇದನ್ನು ಇಷ್ಯೂ ಮಾಡುವುದಕ್ಕಾಗಲಿಲ್ಲ.

ಶ್ರೀ ಗುರುಪಾದಪ್ಪ ನಾಗ್ಮಾರಪಲ್ಲಿ:- ಲಿಸ್ಟ್ ಕೊಡಬಾರದೆಂದು ಏನಿದೆ?

ಶ್ರೀ ಎಂ. ರಾಜಶೇಖರ ಮೂರ್ತಿ:- ಲಿಸ್ಟ್ ಪಬ್ಲಿಷ್ ಮಾಡಬಾರದೆಂದು ಸ್ಟೇ ಇದೆ.

ವಿಷಯ:- ಬೆಳೆ ವಿಮಾ ಯೋಜನೆ

ಚುಕ್ಕೆಗುರುತಿನ ಪ್ರಶ್ನೆ ಸಂಖ್ಯೆ ೫೦:- (೧೪೯)
ಶ್ರೀ ಜಿ.ಎಸ್. ಆಚಾರ್ (ಬೈಂದೂರು)
ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಳೆ ವಿಮಾ ಯೋಜನೆಯನ್ನು ಬೆಳೆ ಸಾಲದ ವಿಮಾ ಯೋಜನೆಯನ್ನಾಗಿ ಅನುಷ್ಠಾನ ಮಾಡಲಾಗುವುದು ಸರಿಯೇ?
ಆ) ನಿಜವಾಗಿ ಹಾನಿ ಆದ ಬೆಳೆಯ ನಷ್ಟವನ್ನು ಗಮನಕ್ಕೆ ತೆಗೆದುಕೊಳ್ಳದೆ, ತಾಲ್ಲೂಕಿನ ಯಾವುದೋ ಭಾಗದಲ್ಲಿ ಉತ್ಪತ್ತಿಯ ಪರಿಶೀಲನೆ ನಡೆಸಿ, ಬೆಳೆ ವಿಮೆಯ ಪರಿಹಾರ ನೀಡುವುದು ಸರಿಯೇ?
ಇ) ಈ ಯೋಜನೆಯನ್ನು ಸಮರ್ಪಕವಾಗಿ ಜಾರಿಗೊಳಿಸಲು ಸರ್ಕಾರದ ಕ್ರಮವೇನು?

ಶ್ರೀ ಎನ್. ಹುಚ್ಚಮಾಸ್ತಿಗೌಡ
ಕೃಷಿ ಸಚಿವರು

ಇಲ್ಲ.

ಈ ಯೋಜನೆಯನ್ನು ಸಾಮೂಹಿಕ ಆಧಾರದ ಮೇಲೆ ಜಾರಿಗೊಳಿಸಲಾಗಿದೆ. ಕೇಂದ್ರ ಸರ್ಕಾದ ಮಾರ್ಗಸೂಚಿಯಂತೆ, ಪ್ರತಿಯೊಂದು ಆರಿಸಿದ ಬೆಳೆಗೂ, ನಿರ್ಧರಿತ ಕ್ಷೇತ್ರದಲ್ಲಿ ೧೬ ಬೆಳೆ ಕಟಾವು ಸಮೀಕ್ಷೆಗಳನ್ನು ವೈಜ್ಞಾನಿಕವಾಗಿ ನಡೆಸಬೇಕಾಗುವುದು ಮತ್ತು ನಿರ್ಧರಿತ ಕ್ಷೇತ್ರದ ಪ್ರಾರಂಭಿಕ ಇಳುವರಿಯನ್ನು ನಿರ್ಧರಿತ ಕ್ಷೇತ್ರದ ೫ ವರ್ಷಗಳ ಸರಾಸರಿ ಇಳುವರಿಯ ಆಧಾರದ ಮೇಲೆ ನಿರ್ಣಯಿಸಬೇಕಾಗುತ್ತದೆ. ಈಗ ಸದ್ಯಕ್ಕೆ ಈ ವಿವರಗಳು ತಾಲ್ಲೂಕು ಮಟ್ಟದಲ್ಲಿ ಮಾತ್ರ ಇರುವುದರಿಂದ ಕರ್ನಾಟಕದಲ್ಲಿ ತಾಲ್ಲೂಕನ್ನು ನಿರ್ಧರಿತ ಕ್ಷೇತ್ರವನ್ನಾಗಿ ಆರಿಸಲಾಗಿದೆ. ಆದುದರಿಂದ ಈ ಯೋಜನೆಯಡಿಯಲ್ಲಿ ತಾಲ್ಲೂಕಿನ ಹಾನಿ ಆದ ಭಾಗದ ಬೆಳೆಯ ಇಳುವರಿಯನ್ನು ಮಾತ್ರ ಗಣನೆಗೆ ತೆಗೆದುಕೊಂಡು ಪರಿಹಾರವನ್ನು ನಿರ್ಧರಿಸಲು ಸಾಧ್ಯವಾಗುವುದಿಲ್ಲ.

ಈ ಯೋಜನೆಯನ್ನು ಸಮರ್ಪಕವಾಗಿ ಜಾರಿಗೊಳಿಸಲು ಬೆಳೆ ಕಟಾವು ಸಮೀಕ್ಷೆಗಳನ್ನು ಇನ್ನುಮುಂದೆ ಮಂಡಲ ಮಟ್ಟದಲ್ಲಿ ನಡೆಸಬೇಕಾಗುವುದು. ಇದಲ್ಲದೇ, ಸಾಲ ಪಡೆಯದೇ ಇರುವ ರೈತರೂ ಸಹಾ ವಿಮಾ ಯೋಜನೆಯಲ್ಲಿ ಪಾಲುಗೊಳ್ಳುವ ಅವಕಾಶವಿರಬೇಕು. ಈ